**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂ:**199/2018**

ಸಿ.ಡಬ್ಲ್ಯೂ–೧೨ ಪಿ.ಡಬ್ಲ್ಯೂ-೪

| | | |
|---|---|---|
| ಹೆಸರು | : | ಗುಲಾಬ |
| ತಂದೆ:ಗಂಡ | : | ಹೈದರಸಾಬ |
| ವಯಸ್ಸು | : | ೬೫ ವರ್ಷ |
| ಉದ್ಯೋಗ | : | ನಿವೃತ್ತ ಎ.ಎಸ.ಐ. |
| ವಾಸಸ್ಥಳ | : | ಅಫಜಲಪೂರ |

ದಿನಾಂಕ:೩೦.೦೧.೨೦೨೦

ಸತ್ಯ ಪ್ರತಿಜ್ಞೆಯ ಮೇರೆಗೆ

---

**ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರ ಅಡಿಯಲ್ಲಿ ಸಾಕ್ಷಿದಾರರ ಹೇಳಿಕೆ:**

**ಮುಖ್ಯ ವಿಚಾರಣೆ:**

ನಾನು ೨೦೧೧ ರಿಂದ ೨೦೧೬ ರವರೆಗೆ ಮಾದನ ಹಿಪ್ಪರಗಾ ಪೋಲಿಸ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕಾರ್ಯನಿರ್ವಹಿಸಿದ್ದೇನೆ.

ದಿ:20.09.2012 ರಂದು ಮಧ್ಯಾಹ್ನ 2.00 ಗಂಟೆಗೆ ಚಾಸಾ-13 ರವರು ಠಾಣೆಗೆ ಹಾಜರಾಗಿ ಮೂರು ಜನ ಆರೋಪಿಗಳು, ಎರಡು ಮೋಟರ್ ಸೈಕಲ್ ಮತ್ತು ಒಂದು ಜ್ಞಾಪನಾ ಪತ್ರದೊಂದಿಗೆ ಠಾಣೆಗೆ ಹಾಜರಾಗಿರುತ್ತಾರೆ. ಸದರಿ ಜ್ಞಾಪನಾ ಪತ್ರದ ಸಾರಾಂಶದ ಮೇಲೆ ಗುನ್ನೆ ನಂ: 42/2012 ನ್ನು ದಾಖಲಿಸಿಕೊಂಡು ಪ್ರ.ವ.ವ.ನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಹಿರಿಯ ಅಧಿಕಾರಿಗಳಿಗೆ ಸಲ್ಲಿಸಿರುತ್ತೇನೆ.

ಮೂವರು ಆರೋಪಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ತದನಂತರ ತನಿಖೆಯಲ್ಲಿ ಕಲಂ 379, 420 ರ ಅಂಶಗಳು ಕಂಡ ಬಂದ ಆಧಾರದ ಮೇಲೆ ದಿನಾಂಕ: 20.09.2012 ರಂದು ಮತ್ತು ದಿ: 21.09.2012 ರಂದು ಜ್ಞಾಪನಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಕಲಂ 420 ಮತ್ತು ಕಲಂ 379 ನ್ನು ಸೇರಿಸಿಕೊಳ್ಳಲು ಪ್ರಾರ್ಥಿಸಿರುತ್ತಾರೆ.

ವಾಹನದ ಸಂಪೂರ್ಣ ಮಾಹಿತಿ ನೀಡುವಂತೆ ಆರ್.ಟಿ.ಓ.ರವರಿಗೆ ಪತ್ರವನ್ನು ಬರೆದಿದ್ದು, ದಿನಾಂಕ: 29.09.2012 ರಂದು ಮಾನ್ಯ ಆರ್.ಟಿ.ಓ.ರವರಿಂದ ವರದಿಯನ್ನು ಪಡೆದಿರುತ್ತೇನೆ. ದಿನಾಂಕ: 20.09.2012 ರಂದು ಚಾಸಾ-5, 6, 9, 10 ರವರುಗಳ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ: 26.09.2012 ರಂದು ಮಾನ್ಯ ನ್ಯಾಯಾಲಯಕ್ಕೆ ಸ್ವತ್ತಿನ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-14 ರವರಿಗೆ ವಹಿಸಿರುತ್ತೇನೆ.

ಚಾಸಾ-1 ರವರು ಸಲ್ಲಿಸಿದ ವರದಿಯನ್ನು ನಿಪಿ-2 ಎಂದು ಈಗಾಗಲೇ ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಪ್ರ.ವ.ವನ್ನು ತೋರಿಸಲಾಗಿ ಸಾಕ್ಷಿಯು ಅದರ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪ್ರ.ವ.ವನ್ನು ನಿಪಿ-3 ಎಂದು ಗುರುತಿಸಲಾಯಿತು, ಅದರ ಮೇಲಿರುವ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಾನು ಕಲಂ 379 ಮತ್ತು 420 ನ್ನು ಸೇರಿಸುವಂತೆ ಮಾನ್ಯ ನ್ಯಾಯಾಲಯಕ್ಕೆ ಪ್ರಾರ್ಥಿಸಿದ ದಾಖಲಾತಿಯನ್ನು ನೋಡಿದರೆ ಗುರುತಿಸುತ್ತೇನೆ. ಆರ್.ಟಿ.ಓ.ರಿಗೆ ಸಲ್ಲಿಸಿದ ಅರ್ಜಿ ಮತ್ತು ವರದಿಯನ್ನು ನೋಡಿದರೆ ಗುರುತಿಸುತ್ತೇನೆ, ಅದನ್ನು ಈಗಾಗಲೇ ಮೂಲ ಕಡತದಲ್ಲಿ ಗುರುತಿಸಲಾಗಿದೆ. ಆ ದಿನ ಎ.ಎಸ್.ಐ.ರವರು ಕರೆದುಕೊಂಡು ಬಂದ ಮೂರು ಜನ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ, ಜಪ್ತಿಪಡಿಸಿಕೊಂಡ ಎರಡು ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ.

**ಪಾ. ಸವಾಲುಃ-**

ಆರೋಪಿತರು ತಲೆ ಮರೆಸಿಕೊಂಡಿರುತ್ತಾರೆ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.